"ನಿನ್ನ ತಮ್ಮನಿಗೆ ನೀನೇ ಹಾಳು ಮಾಡಿದ್ದು. ಈಗ ನಾನು ಹೊರಗೆ ತಲೆ ಹಾಕುವ ಹಾಗಿಲ್ಲ. ಮೊನ್ನೆ ಕಾಲೇಜಿನ ಹಿರೇಮಠ್ ಮಾಸ್ತರು ನನ್ನಾಫೀಸಿಗೆ ಬಂದಿದ್ದರು. ಉಷಾ ಹತ್ತಿರ ಇವನಿಗೇನು ಮಾತು? ಅವರದು ಅತಿಯಾಗಿದೆ. ಅವೆಲ್ಲ ಆಟದ ಬೊಂಬೆಗಳು..."

"ನೀವೂ ಅವನನ್ನು ಮುದ್ದು ಮಾಡಿದ್ರಿ. ನಾಳೆನೇ ಊರಿಗೆ ಕಳಿಸಿ. ಅವನು ಓದಿ ಉದ್ಧಾರ ಆಗೋದು ಅಷ್ಟರಲೇ ಐತೆ."

"ನಾನು ಹೇಗೇ ಹೇಳ್ಲಿ? ನೀನೇ ಹೇಳು. ಎಷ್ಟಾದರೂ ನೀನು ಅಕ್ಕ. ಊರಿನಿಂದ ಕಾಗದ ಬಂದೈತೆ. ಮಂಡ್ಯದಲ್ಲಿ ಕೆಲಸಕ್ಕೆ ಇಂಟರ್‌ವ್ಯೂ ಬಂದಿದೆಯಂತೆ ಎಂದು ಸುಳ್ಳು ಹೇಳು. ಊರಿಗೆ ಕಳಿಸೋಣ. ಮಾವನವರಿಗೆ ಆಗಲೇ ಎಲ್ಲಾ ಕಥೇನ ವಿವರಿಸಿ ಪತ್ರ ಹಾಕಿದ್ದೇನೆ. ಇವನು ಊರಿಗೆ ಹೋದರೆ ಮಾವ ಅಲ್ಲಿಂದ ಮತ್ತೆ ಇವನನ್ನು ಕಳಿಸುವುದಿಲ್ಲ."

"ನೀವೇ ಹೇಳಿ. ಅಪ್ಪನಿಗೆ ಕೆಲಸಕ್ಕಾದರೂ ಸಹಾಯವಾಗಲಿ. ಒಂದು ಜೊತೆ ಎತ್ತು ತಂದಿದ್ದಾರಂತೆ. ನಾನಂತೂ ಒಂದು ತುತ್ತು ಅನ್ನ ಹಾಕೋದಿಲ್ಲ."

"ಅಕ್ಕ–ತಮ್ಮ ಏನಾದ್ರೂ ಮಾಡಿಕೊಳ್ಳಿ. ನನಗಂತೂ ಅವನು ಈ ಮನೆಯಲ್ಲಿ ಒಂದು ಕ್ಷಣ ನಿಲ್ಲುವುದೂ ಇಷ್ಟವಿಲ್ಲ. ಇಂಥವರನ್ನು ಸಾಕುವುದರ ಬದಲು ನಾಯಿಗಳನ್ನು ಸಾಕೋದು ವಾಸಿ."

"ನಾನು ಕಾಲಿಡಿದು ಬೇಡಿದ್ನಾ? ಅವನನ್ನು ಕಾರವಾರಕ್ಕೆ ಕರೆದುಕೊಂಡು ಬನ್ನಿ ಅಂತ! ನೀವೇ ಬಲವಂತ ಮಾಡಿ ಕರೆದುಕೊಂಡು ಬಂದ್ರಿ. ಈಗ ಅನುಭವಿಸಿ."

"ಬಾಯ್ಮುಚ್ಚೆ ಸಾಕು. ಸಹಾಯಕ್ಕೆ ಬೇಕು ಅಂತ ನೀನೇ ಕರೆದಿದ್ದು. ನನಗೆ ಯಾವನ ಅಗತ್ಯವೂ ಇಲ್ಲ. ಇವತ್ತೇ ಎಲ್ಲಿಯಾದರೂ ಹಾಳಾಗಿ ಹೋಗ್ಲಿ. ಪಿಯುಸೀ ಓದುವಾಗಲೇ ಲವ್ ಬೇರೆ ಕೇಡು. ಹತ್ತು ಪೈಸೇ ದುಡಿಯೋ ತಾಕತ್ತಿಲ್ಲ. ರಾತ್ರಿ ಎಂಟಾಗಿದೆ. ಇನ್ನೂ ಮನೆಗೆ ಬಂದಿಲ್ಲ. ಯಾವ ಬೀಚಿನಲ್ಲಿ ಅವಳ ಜೊತೆ ಮಲಗಿದ್ದಾನೋ? ಛಿ... ಛಿ."

...ಇಡೀ ಜಗತ್ತು ದೂರ ಅನ್ನಿಸಿದ್ದರೂ ದೇವರಾಜನಿಗೆ ದುಃಖವಾಗುತ್ತಿರಲಿಲ್ಲ. ಆದರೆ ಒಳಗೆ ಕೇಳಿಬರುತ್ತಿರುವ ದನಿಗಳು ಅಕ್ಕ–ಭಾವನದು. ಮತ್ತೆ ಮತ್ತೆ ಖಚಿತಪಡಿಸಿಕೊಂಡ. ಅದೇ ಅಕ್ಕ! ನನ್ನೊಡನೆ ಮಾರಮ್ಮನ ಗುಡಿಯೆದುರು ಕುಂಟೆಬಿಲ್ಲೆ ಆಡುತ್ತಿದ್ದವಳು. ಬಿದ್ದು ಮಂಡಿ ತರಚಿಕೊಂಡಾಗ ತುಂಬೆ ರಸ ಹಿಂಡಿದವಳು. ಸಂತೆಯ ಕಡಲೆಪುರಿಯನ್ನು ಲಂಗದೊಳಗೆ ತುಂಬಿ ದಿನಮಾನ ತಿನ್ನಿಸಿ ಬೆಳೆದವಳು. ಅದೇ ಭಾವ! ಹೆಣ್ಣು ನೋಡಲು ಬಂದಾಗ ನನ್ನ ಕೆನ್ನೆ ಚಿವುಟಿ ಹತ್ತು ರೂಪಾಯಿ ನೋಟು ಕೊಟ್ಟು 'ಅಕ್ಕ ಎಲ್ಲಿ?' ಅಂದಿದ್ದವರು. ದೊಡ್ಡ ತೆಂಗಿನ ಮರಗಳನ್ನು ನಾನು ಸರಸರ ಏರಿ ಎಳನೀರು ಕಿತ್ತುಕೊಟ್ಟಾಗ ಭೇಷ್ ಭೇಷ್ ಅಂತ ಬಾಯಿ ಚಪ್ಪರಿಸಿದವರು. ಈಗ? ದೇವರಾಜ ಮತ್ತೆ ಬಾಗಿಲು ತಟ್ಟಲು ಯತ್ನಿಸಲಿಲ್ಲ.

ಈಗ ಮಳೆ ಜೋರಾಗಿತ್ತು. ಮಳೆಯೆಂದರೆ ವಿಪರೀತ ಆಸೆ ಪಡುತ್ತಿದ್ದಾತನಿಗೆ ಈಗ ಮಾತ್ರ ಯಾರೋ ಆಗಸದಿಂದ ಕಲ್ಲು ತೂರುತ್ತಿದ್ದಾರೆ ಅನ್ನಿಸ್ತು. ನೌಕರಿಗೂ –ಹಣಕ್ಕೂ– ಅನ್ನಕ್ಕೂ– ವಯಸ್ಸಿಗೂ –ಪ್ರೀತಿಗೂ ಎಷ್ಟೊಂದು ಸಂಬಂಧದ ಎಳೆ ಬಿಗಿದುಕೊಂಡಿವೆ ಎಂಬ ಬಗ್ಗೆ ಯೋಚಿಸತೊಡಗಿದ. ನಿಧಾನವಾಗಿ ಹೊರಗೆ ಹೊರಟ. ಮನಸ್ಸು ಸುಮ್ಮನೆ ಯೋಚಿಸುತ್ತಿತ್ತು. ಕಾಲುಗಳು ನಿರುದ್ದಿಶ್ಯವಾಗಿ ನಡೆಯುತ್ತಿದ್ದವು.

ನಾನು ಉಷೆಯನ್ನು ಪ್ರೀತಿಸಿದ್ದು ತಪ್ಪೆ? ನೌಕರಿ ಇಲ್ಲದವರು ಪ್ರೀತಿಸಬಾರದೆ? ಅನ್ನ, ಅದನ್ನು ತಂದುಕೊಡಬಲ್ಲ ಹಣ ಇವು ನನ್ನ ಪ್ರೀತಿಗಿಂತ ಮುಖ್ಯವೇ? ಇಲ್ಲ. ನನ್ನ ಪ್ರೀತಿಯೇ ದೊಡ್ಡದು.